ದಿನಾಂಕ 18.08.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

3) ನನ್ನ ಗಂಡನ ಹೆಸರು ತಮ್ಮಯ್ಯ. ಚಾಸಾ.3 ರಿಂದ 5 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ.3 ರವರು ನನ್ನ ಗಂಡನ ತಮ್ಮನ ಹೆಂಡತಿ ಎಂದರೆ ಸರಿ. ಉಮಾದೇವಿರವರು ನನ್ನ ಗಂಡನ ಅಣ್ಣನ ಮಗಳು ಎಂದರೆ ಸರಿ. ಶಂಕರಮ್ಮರವರು ನನ್ನ ಗಂಡನ ತಂಗಿ ಎಂದರೆ ಸರಿ. ಶಂಕರಮ್ಮನನ್ನು ಬಂಡೀಹಳ್ಳಿಗೆ ಕೊಟ್ಟಿರುತ್ತೇವೆ. ಚಾಸಾ.5 ರವರು ಬಂಡೀಹಳ್ಳಿ ಗ್ರಾಮದವರು ಎಂದರೆ ಸರಿ. ಚಂದ್ರಯ್ಯ ಮತ್ತು ಮೋಹನ್ ಕುಮಾರ್ ರವರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ.5 ರವರು ನಮ್ಮ ಜನಾಂಗದವರು ಎಂದರೆ ಸರಿ. ನನ್ನ ಗಂಡನ ವಿರುದ್ದ ಸಿಂಗನಹಳ್ಳಿ ಗ್ರಾಮದ ಪುಷ್ಪಾವತಿರವರು ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸುಳ್ಳು ದೂರನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

4) ಮಾಲಾರವರು ನಮ್ಮ ಊರಿನಲ್ಲಿ ಅಂಗಡಿಯನ್ನಿಟ್ಟುಕೊಂಡು ದಿನಸಿ ಮಾರಾಟ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಎಣ್ಣೆ ಮಾರಾಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಎಣ್ಣೆ ಮಾರಾಟ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ವಿರುದ್ದ ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ಚಾಸಾ.6 ರವರು ವಿದ್ಯಾವಂತರು ಎಂದರೆ ಸರಿ. ಅವರು ಪದವಿಯನ್ನು ಪೂರ್ತಿ ಮಾಡಿರುತ್ತಾರೆ ಎಂದರೆ ಸರಿ. ಅವರು ಇಂದು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಯಾವ ರೀತಿ ಸಾಕ್ಷ್ಯ ಹೇಳಬೇಕೆಂದು ಅವರು ನನಗೆ ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಲಾಯರ್ ಹೇಳಿಕೊಡುತ್ತಾರೆಂದು ನುಡಿಯುತ್ತಾರೆ.

5) 2 ನೇ ಆರೋಪಿ ನನ್ನ, ನನ್ನ ಗಂಡ, ನನ್ನ ಭಾವನವರ ವಿರುದ್ದ ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಹಾಕಿ ಶಾಶ್ವತ ನಿರ್ಬಂಧಕಾಜ್ಞೆ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಾವನ ಪರವಾಗಿ ಡಿಕ್ರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಅದರ ಪ್ರತಿ ನನ್ನ ಮಾವನ ಹತ್ತಿರ ಇರುತ್ತದೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ಕುಟುಂಬದ ವಿರುದ್ದ ಸಿವಿಲ್ ದಾವೆಯನ್ನು ಹಾಕಿ ಅವರ ಪರ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನಾವು ಕದ್ದು ಹೋಗಿ ಅಡಿಕೆಕಾಯಿಗಳನ್ನು ಕಿತ್ತುಕೊಂಡು ಬಂದ ಜಮೀನಿನ ಸ್ವಾಧೀನದಲ್ಲಿ ಅವರ ತಾತನ ಕಾಲದಿಂದಲೂ ಇರುತ್ತಾರೆ ಎಂದರೆ ಸರಿಯಲ್ಲ.

6) ದಿಃ 12.10.2019 ರಂದು ಚಾಸಾ.6, ರಾಮಯ್ಯ, ಸ್ವಾಮಿ ಅಲಿಯಾಸ್ ಶ್ರೀನಿವಾಸ್ , ನನ್ನ ಗಂಡ ಆರೋಪಿತರು ಸ್ವಾಧೀನದಲ್ಲಿರುವ ಸ.ನಂ.24 ರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅಡಿಕೆ ಕಾಯಿಯನ್ನು ಕಳ್ಳತನ ಮಾಡಿ ಲಗೇಜ್ ಆಟೋ ವಾಹನದಲ್ಲಿ ತುಂಬಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಜಮೀನಿನಲ್ಲಿ ಇಲ್ಲದೇ ಇದ್ದ ಸಮಯದಲ್ಲಿ ಅವರುಗಳು ಜಮೀನಿಗೆ ಹೋಗಿ ಅಡಿಕೆಕಾಯಿಯನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ದೊಡ್ಡರಂಗಯ್ಯ ಮತ್ತು ಕರೇರಂಗಪ್ಪರವರು ಆರೋಪಿತರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಕೂಡಲೇ ಬಂದು ಜಮೀನಿನಲ್ಲಿ ನೋಡಿದಾಗ ಸುಮಾರು 80 ಅಡಿಕೆ ಮರಗಳಿಂದ ಎರಡು ಕ್ವಿಂಟಾಲ್ ಅಡಿಕೆ ಕಾಯಿಯನ್ನು ಕದ್ದುಕೊಂಡು ಹೋಗಿರುವುದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

7) ಈ ಬಗ್ಗ 2 ನೇ ಆರೋಪಿಯು ನನ್ನ ಗಂಡ ಮತ್ತು ಇತರರ ವಿರುದ್ದ ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ದೂರಿನ ಆಧಾರದ ಮೇರೆಗೆ ಪ್ರಕರಣ ದಾಖಲಾಗಿ ತನಿಖೆಯನ್ನು ಮಾಡಿ

ದೋ.ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರಕರಣ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಗಂಡ ಮತ್ತು ಇತರರನ್ನು ದಸ್ತಗಿರಿ ಮಾಡಿಕೊಳ್ಳಲು ಪೊಲೀಸರು ನಮ್ಮ ಊರಿಗೆ ಬಂದಿದ್ದರು ಎಂದರೆ ಸರಿ. ಆಗ ನನ್ನ ಗಂಡ ಮತ್ತು ಇತರರು ತಪ್ಪಿಸಿಕೊಂಡು ಹೋಗಿ ಚಾಸಾ.1 ಮತ್ತು ನನ್ನ ಮೂಲಕ ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡ ಮತ್ತು ಇತರರ ವಿರುದ್ದ ದಾಖಲು ಮಾಡಿರುವ ಪ್ರರಕಣದಿಂದ ತಪ್ಪಿಸಿಕೊಳ್ಳಲು ಅವರ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

8) ಜಮೀನಿನ ಚಕ್ಕುಬಂದಿ ಹೇಳಲಾಗುವುದಿಲ್ಲ. ಸದರಿ ಜಮೀನಿನ ಎದುರಿನಲ್ಲಿ ನರಸಿಂಹಯ್ಯರವರ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ಪಕ್ಕದಲ್ಲಿ ಮಂಜುನಾಥ್ ರವರ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ಅದೇ ರೀತಿ ದೊಡ್ಡರಂಗಯ್ಯ ಮತ್ತು ರಂಗಯ್ಯರವರ ಜಮೀನುಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ರೈತರು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆವರೆಗೆ ಜಮೀನುಗಳಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಗಲಾಟೆ ನಡೆಯಿತು ಎನ್ನಲಾದ ಸಂದರ್ಭದಲ್ಲಿ ಅಕ್ಕಪಕ್ಕದ ಜಮೀನಿನ ರೈತರು ಸ್ಥಳಕ್ಕೆ ಬಂದಿದ್ದರು. ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾದ ಮಾರನೇ ದಿನ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾನು ಮತ್ತು ಚಾಸಾ.1 ರವರು ಗಲಾಟೆಯಾದ ದಿನದಂದು ಆಂಬುಲೆನ್ಸ್ ವಾಹನದಲ್ಲಿ ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡದುಕೊಂಡು ಪೋ.ಠಾಣೆಗೆ ಹೋಗಿ ಸಂಜೆ 4 ರಿಂದ 5 ಗಂಟೆಗೆ ಲಿಖಿತ ದೂರನ್ನು ಸಲ್ಲಿಸಿರುತ್ತೇವೆ.

9) ದೂರನ್ನು ಕೊಟ್ಟ ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಆಗ ಪೊಲೀಸರು ಅಕ್ಕಪಕ್ಕದವರನ್ನು ವಿಚಾರಣೆ ಮಾಡಿರುತ್ತಾರೆ. ಆಗ ಅಕ್ಕಪಕ್ಕದವರು ನನ್ನ ಗಂಡ ಮತ್ತು ಇತರರು 1 ರಿಂದ 3 ನೇ ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಅಡಿಕೆಕಾಯಿಯನ್ನು ಕಳ್ಳತನಮಾಡಿಕೊಂಡು ಹೋಗಿರುತ್ತಾರೆಂದು ಹೇಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಪೊಲೀಸರು ನಾವು ಕೊಟ್ಟಿರುವ ದೂರು ಸುಳ್ಳಿನಿಂದ

ಕೂಡಿರುತ್ತದೆ ಎಂದು ಯಾವುದೇ ಪ್ರರಕಣ ದಾಖಲು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ.6 ರವರು ಚಿಕ್ಕನಾಯಕನಹಳ್ಳಿ ದಲಿತ ಸಂಘಟನೆಯಲ್ಲಿರುತ್ತಾರೆ ಎಂದರೆ ಸರಿ. ದಿಃ 19.10.2019 ರಂದು ನಾವು ದಲಿತ ಸಂಘಟನೆಯವರನ್ನು ಕರೆದುಕೊಂಡು ಪೋ.ಠಾಣೆಯ ಹತ್ತಿರ ಹೋಗಿದ್ದೆವು ಎಂದರೆ ಸರಿಯಲ್ಲ. ಆಗ ಪೊಲೀಸರ ಮೇಲೆ ಒತ್ತಡ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಪ್ರಕರಣವನ್ನು ದಾಖಲು ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದರಿಂದ ತಿಪಟೂರಿನ ಡಿವೈಎಸ್‌ಪಿ ರವರ ಕಚೇರಿಗೆ ಹೋಗಿ ಧರಣಿ ಮಾಡುತ್ತೇವೆಂದು ಹೇಳಿ ಒತ್ತಡ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ನಾವೇ ಹೋಗಿರುತ್ತೇವೆ. ನಾವು ಆಸ್ಪತ್ರೆಗೆ ಹೋಗಿ ಸುಳ್ಳು ಗಾ.ಪ್ರ.ಪತ್ರವನ್ನು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

10) ದಿಃ02.02.2020 ರಂದು ಪುನಃ ನಾವು ಆರೋಪಿತರು ಸ್ವಾಧೀನದಲ್ಲಿರುವ ಜಮೀನಿಗೆ ಹೋಗಿ ಸಂಜೆ 5.45 ಗಂಟೆಗೆ 1 ಮತ್ತು 3 ನೇ ಆರೋಪಿತರ ಮೇಲೆ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಬಗ್ಗೆ 3 ನೇ ಆರೋಪಿ ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ದೂರನ್ನು ನೀಡಿದ್ದು ಪ್ರಕರಣ ದಾಖಲಾಗಿ ತನಿಖೆಯನ್ನು ಮಾಡಿದ ನಂತರ ದೋ.ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ತಿಪಟೂರಿನ ನ್ಯಾಯಾಲಯದಲ್ಲಿ ನಾವು 13 ಜನ ವಿಚಾರಣೆಗೆ ಹಾಜರಾಗುತ್ತಿದ್ದೇವೆ ಎಂದರೆ ಸರಿ. ಸದರಿ ಪ್ರಕರಣದಿಂದ ತಪ್ಪಿಸಿಕೂಳ್ಳಲು ಪುನಃ ನಾವು ಬೇರೆ ದೂರನ್ನು ಆರೋಪಿತರ ವಿರುದ್ದ ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಪಕ್ಕದ ಜಮೀನಿನಲ್ಲಿ ಚಾಸಾ.1 ರವರು ಕೆಲಸ ಮಾಡುತ್ತಿದ್ದು ಚಾಸಾ.1 ಮತ್ತು ಆರೋಪಿ ಗಂಗಣ್ಣರವರ ಮಧ್ಯೆ ಕಿರುಚಾಡುವ ಶಬ್ದ ಕೇಳಿ ನಾನು ಅಲಿಲಗೆ ಹೋಗಿದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಜಯಣ್ಣರವರು ಚಾಸಾ.1 ರವರೊಂದಿಗೆ ಗಲಾಟೆ ತೆಗೆದು ಮಾದಿಗ ಸೂಳೇ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ನನಗೆ ಚಪ್ಪಲಿ ಕಾಲಿನಿಂದ

ಒದ್ದನು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಯು ದೊಣ್ಣೆಯಿಂದ ನನ್ನ ಸೊಂಟಕ್ಕೆ ಹೊಡೆದಿರುತ್ತಾನೆಂದು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

11) ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಪೊಲೀಸರೊಂದಿಗೆ ಭಾವಚಿತ್ರವನ್ನು ತೆಗೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದೊಣ್ಣೆಯನ್ನುಪೊಲೀಸರು ಸ್ಥಳಕ್ಕೆ ಬಂದಾಗ ತೆಗೆದುಕೊಂಡು ಹೋಗಿರುತ್ತಾರೆ. ದೊಣ್ಣೆಯನ್ನು ನಾನೇ ಪೋ.ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ಹೂಡಿರುವ ಪ್ರಕರಣದಿಂದ ತಪ್ಪಿಸಿಕೊಳ್ಳಲು ಅವರ ವಿರುದ್ದ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ